ಆ) ವೃಷಭಾವತಿ ಕಣಿವೆಗೆ ನಗರಸಭೆಯ ಒಳಚರಂಡಿಯ ಕಲುಷಿತ ನೀರು ಹಾಗೂ ಇತರ ಚಟುವಟಿಕೆಗಳಿಂದ ಉತ್ಪತ್ತಿಯಾಗುವ ಕಲುಷಿತ ನೀರು ಸೇರುತ್ತದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಕಲುಷಿತ ನೀರಿನ ವಿಶ್ಲೇಷಣೆ ನಡೆಸಿದಾಗ ಆರ್ಸೇನಿಕ್, ನಿಕ್ಕಲ್ ಮತ್ತು ಬೋರಾನ್ ಇವುಗಳು ಗುರ್ತಿಸುವ ವ್ಯಾಪ್ತಿಯಲ್ಲಿ ಇರುವುದಿಲ್ಲ. ತಾಮ್ರ ಸತವು ಕಬ್ಬಿಣದ ಅಂಶ ಇವುಗಳು ಮಿತಿಯಲ್ಲಿದ್ದು ಲೆಡ್ ಕ್ರೊಮಿಯಂ (CHROMIUM) ಮತ್ತು ಪಾದರಸ (MERCURY) ಇವುಗಳು ನಿಗಧಿಪಡಿಸಿರುವ ಮಿತಿಯಿಂದ ಹೆಚ್ಚಾಗಿರುವುದು ತಿಳಿದು ಬಂದಿದೆ.

ಇ) ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ನಗರಸಭೆಯ ಒಳಚರಂಡಿಯ ಕಲುಷಿತ ನೀರನ್ನು ಶುದ್ಧೀಕರಣ ಮಾಡಲು ಈಗ ಪ್ರಾಥಮಿಕ ಸಂಸ್ಕರಣ ಘಟಕವನ್ನು ಅಳವಡಿಸಿದ್ದಾರೆ. ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಎರಡನೆಯ ಸಂಸ್ಕರಣ ಘಟಕವನ್ನು ನಿರ್ಮಿಸುತ್ತಿದ್ದು, ದಿನಂಪ್ರತಿ 180 ಮಿ.ಲಿ.ನಷ್ಟು ಕಲುಷಿತ ನೀರನ್ನು ಸಂಸ್ಕರಣಗೊಳಿಸುವ ಸಾಮರ್ಥ್ಯವಿರುತ್ತದೆ. ಈಗ ಸುಮಾರು ದಿನಂಪ್ರತಿ ಸುಮಾರು 70-80 ಮಿಲಿಯನ್ ಟನ್‌ನಷ್ಟು ಒಳಚರಂಡಿಯ ಕಲುಷಿತ ನೀರು ಮಾತ್ರ ಪ್ರಾಥಮಿಕ ಸಂಸ್ಕರಣ ಘಟಕಕ್ಕೆ ಬಂದು ಸೇರುತ್ತಿದ್ದು, ಮಿಕ್ಕ ಕಲುಷಿತ ನೀರು ಚರಂಡಿ ವ್ಯವಸ್ಥೆ ಇಲ್ಲದ ಕಾರಣದಿಂದ ವೃಷಭಾವತಿ ಕಣಿವೆಗೆ ನೇರವಾಗಿ ಸೇರುತ್ತಿದೆ. ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಈ ದಿಸೆಯಲ್ಲಿ ಚರಂಡಿ ವ್ಯವಸ್ಥೆಯನ್ನು ಪೂರ್ಣಗೊಳಿಸಿ ಇವುಗಳ ಕಲುಷಿತ ನೀರನ್ನು ಸಂಸ್ಕರಣ ಘಟಕಕ್ಕೆ ಸೇರುವಂತೆ ಮಾಡಬೇಕು. ಹಾಗೆ ಮಾಡಿದ್ದಲ್ಲಿ ವೃಷಭಾವತಿ ನದಿಯಲ್ಲಿನ ನೀರಿನ ಗುಣಮಟ್ಟವು ಉತ್ತಮಗೊಳುತ್ತದೆ.

ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳಿಗೆ ಅಕ್ಕಿ ಕೊಡುವ ಯೋಜನೆ.

1837 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳಿಗೆ ಅಕ್ಕಿಕೊಡುವ ಯೋಜನೆ ಎಂದಿನಿಂದ ಜಾರಿಗೆ ತರಲಾಗಿದೆ?

ಆ) ಈ ರೀತಿ ಅಕ್ಕಿ ವಿತರಿಸುವ ಉದ್ದೇಶ ಏನು?

ಇ) ಪ್ರತಿ ಮಕ್ಕಳಿಗೆ ವಿತರಿಸುವ ಅಕ್ಕಿಯ ಪ್ರಮಾಣ ಎಷ್ಟು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 15.8.95ರಿಂದ.

ಆ) 1. ಶಾಲೆಗಳಲ್ಲಿ ಮಕ್ಕಳ ಹಾಜರಾತಿಯನ್ನು ಉತ್ತಮ ಪಡಿಸುವುದು.

2. ಮಕ್ಕಳ ಪೌಷ್ಟಿಕತೆಯನ್ನು ಉತ್ತಮಪಡಿಸುವುದು.

3. ಮಕ್ಕಳು ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಶಾಲೆ ಬಿಡುವುದನ್ನು ತಪ್ಪಿಸುವುದು.

ಇ) ಪ್ರತಿ ಮಗುವಿಗೆ ಒಂದು ತಿಂಗಳಿಗೆ 3 ಕೆ.ಜಿಯಂತೆ ಅಕ್ಕಿ: ಗೋಧಿಯನ್ನು ವಿತರಿಸಲಾಗುತ್ತಿದೆ.